ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 370/2022
ಪಿ.ಡಬ್ಲ್ಯೂ :: 01

ದಿನಾಂಕ: 17-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ವಾದಿ ಪರ ಶ್ರೀಮತಿ ಎ ಸಿ ಹೆಚ್ ವಕೀಲರಿಂದ

ನಾನು ಈ ಕೇಸಿನ :: ವಾದಿ

ನಾನು ನನ್ನ ಪ್ರಮಾಣ ಪತ್ರವನ್ನು ಈ ದಿವಸ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದನ್ನು ನಾನು ಓದಿ ಹೇಳಿ ಕೇಳಿ ಅರ್ಥೈಸಿಕೊಂಡು ಬೆರಳಚ್ಚು ಮಾಡಿಸಿರುತ್ತೇನೆ ಅದರಲ್ಲಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಕೇಳಿಕೊಳ್ಳುತ್ತೇನೆ

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ.

| ಕ್ರಮ ಸಂಖ್ಯೆ | ದಾಖಲಾತಿ ವಿವರ | ನಿಶಾನೆ |
|---|---|---|
| 1 | ದಿನಾಂಕ 11-04-2022 ರಂದು ಪ್ರತಿವಾದಿ 1 ರಿಂದ 7 ರವರಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 80 ರಡಿ ಕೊಟ್ಟಿರುವ ನೋಟೀಸಿನ ಕಛೇರಿ ಪ್ರತಿ, | ನಿಪಿ -1 |
| 2 | ನಿಪಿ-1 ಕ್ಕೆ ಸಂಬಂದಪಟ್ಟ 07 ಅಂಚೆ ರಶೀದಿಗಳು, | ನಿಪಿ -2 ರಿಂದ 8 |
| 3 | ನಿಪಿ-1 ಕ್ಕೆ ಸಂಬಂದಪಟ್ಟ 07 ಸ್ವೀಕೃತಿಗಳು, | ನಿಪಿ -9 ರಿಂದ 15 |
| 4 | ದಿನಾಂಕ 09-06-2022 ರಂದು ಉಪ ನಿರ್ದೇಶಕರು, ಆಡಳಿತ, ಸಾರ್ವಜನಿಕರ ಶಿಕ್ಷಣ ಇಲಾಖೆ ಉಡುಪಿ ಜಿಲ್ಲೆ, ಇವರು ನಮ್ಮ ವಕೀಲರಿಗೆ ನೀಡಿದ ಹಿಂಬರಹ, | ನಿಪಿ -16 |
| 5 | ನನ್ನ ಆಧಾರ್ ಕಾರ್ಡಿನ ನೋಟರಿ ಪ್ರತಿ, (ಮೂಲ ಪ್ರತಿಯನ್ನು ಪರಿಶೀಲಿಸಿ ವಾದಿಗೆ ಹಿಂತಿರುಗಿಸಲಾಯಿತು). | ನಿಪಿ -17 |
| 6 | ನನ್ನ ಪಡಿತರ ಚೀಟಿಯ ನೋಟರಿ ಪ್ರತಿ, (ಮೂಲ ಪ್ರತಿಯನ್ನು ಪರಿಶೀಲಿಸಿ ವಾದಿಗೆ ಹಿಂತಿರುಗಿಸಲಾಯಿತು). | ನಿಪಿ -18 |
| 7 | ನನ್ನ ಮಗಳ ಆಧಾರ್ ಕಾರ್ಡಿನ ನೋಟರಿ ಪ್ರತಿ, (ಮೂಲ ಪ್ರತಿಯನ್ನು ಪರಿಶೀಲಿಸಿ ವಾದಿಗೆ ಹಿಂತಿರುಗಿಸಲಾಯಿತು). | ನಿಪಿ -19 |

ಪಾಟೀ ಸವಾಲು :: ಪ್ರತಿವಾದಿ **4** ರಿಂದ **7** ರವರ ಪರ ಮಾನ್ಯ ಎ ಜೆ ಪಿ ರವರಿಂದ

2. ನನ್ನ ಮಗಳು ಸಾನ್ಯ, ಇವರನ್ನು ಬಸ್ರೂರು ಶಾಲೆಗೆ ದಾಖಲು ಮಾಡಿರುತ್ತೇನೆ. ದಾಖಲು ಮಾಡುವಾಗ ಆಕೆಯ ಹೆಸರನ್ನು ಮನವಿ ಎಂದು ದಾಖಲಿಸಿರುತ್ತೇನೆ. ಅದು ಸರಕಾರಿ ಶಾಲೆ.

ಅಲ್ಲಿ 7 ನೇ ತರಗತಿವರೆಗೆ ಶಾಲೆ ಇರುತ್ತದೆ. 8 ರಿಂದ 10 ನೇ ತರಗತಿಯನ್ನು ಬಸ್ರೂರಿನ ನಿವೇದಿತಾ ಶಾಲೆಯಲ್ಲಿ ಓದಿರುತ್ತಾಳೆ. ಆ ಶಾಲೆಯ ದಾಖಲಾತಿಯಲ್ಲಿ ಸಹ ನನ್ನ ಮಗಳ ಹೆಸರನ್ನು ಮನವಿ ಎಂದು ನೊಂದಾಯಿಸಿರುತ್ತೇನೆ. ನನ್ನ ಮಗಳನ್ನು ಮುಂದೆ ಓದಿಸಿರುವುದಿಲ್ಲ. 10 ನೇ ತರಗತಿಯಲ್ಲಿ ನನ್ನ ಮಗಳು ಒಂದು ವಿಷಯದಲ್ಲಿ ನಪಾಸು ಆಗಿರುತ್ತಾಳೆ. ಮಗಳನ್ನು ಶಾಲೆಗೆ ದಾಖಲಿಸುವಾಗ ಮಗಳ ಹೆಸರನ್ನು ಮನವಿ ಹಾಗೂ ತಂದೆ ಹೆಸರು ರಾಜು ಎಂದು ಕೊಟ್ಟಿರುತ್ತೇನೆ ಎಂದರೆ ಸರಿ. ಈ ವಿಚಾರದಲ್ಲಿ ಶಾಲೆಯವರದ್ದು ತಪ್ಪು ಇರುವುದಿಲ್ಲ, ನಾನು ಹೇಳಿದಂತೆ ದಾಖಲಿಸಿಕೊಂಡಿರುತ್ತಾರೆ.

3. ಜನನ ಪ್ರಮಾಣ ಪತ್ರದಲ್ಲೂ ಸಹ ಮಗಳ ಹೆಸರನ್ನು ಮನವಿ ಹಾಗೂ ತಂದೆ ಹೆಸರು ರಾಜು ಎಂದು ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಈಗ ವಿಚ್ಛೇದನ ಪಡೆದುಕೊಂಡಿದ್ದು, ನಮ್ಮ ಜಾತಿಗೆ ಸೇರ್ಪಡೆಯಾಗಿರುತ್ತೇನೆ. ಹಾಗಾಗಿ ಹೆಸರು ಬದಲಾವಣೆ ಕೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಶಾಲಾ ದಾಖಲಾತಿಗಳಲ್ಲಿ ಮಗಳ ಹೆಸರು ಮನವಿ ಹಾಗೂ ಜಾತಿ ಆದಿ ದ್ರಾವಿಡ ಇರುತ್ತದೆ ಎಂದರೆ ಸರಿ. ಹೆಸರು ಬದಲಾಯಿಸಲು ಪ್ರತಿವಾದಿ 4 ರಿಂದ 7 ರವರಿಗೆ ನೋಟೀಸು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸಲ್ಲಿಸಲು ನನಗೆ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ಪಂಗಡದಲ್ಲಿ ತೊಂದರೆ ಆಗುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರದ್ದು ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹ ಅವರ ವಿರುದ್ಧ ಪ್ರಕರಣ ಸಲ್ಲಿಸಿ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ                ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ